MADAM SPEAKER. All the Papers are laid on the Table of the House.

ಶ್ರೀ ಕಾಗೋಡು ತಿಮ್ಮಪ್ಪ.—ಜಿಲ್ಲಾ ಬ್ಯಾಂಕುಗಳ ವಿಚಾರದಲ್ಲಿ ನಾವು ಚರ್ಚೆಮಾಡಬೇಕು ಎಂದು ವಿಷಯ ಕೊಟ್ಟಿದ್ದರೂ ಕೂಡ, ಎಲ್ಲಾ ಬ್ಯಾಂಕುಗಳ ವಿಚಾರದಲ್ಲಿ ಚರ್ಚೆ ಮಾಡತಕ್ಕ ಸಂದರ್ಭ ಇದೆ. ಎಲ್ಲಾ ೧೯ ಜಿಲ್ಲೆಗಳಲ್ಲಿ ಜಿಲ್ಲಾ ಬ್ಯಾಂಕುಗಳಿಗೆ ಸಂಬಂಧಪಟ್ಟ ಕಾರ್ಯಕ್ರಮದ ವರದಿಯನ್ನು ನಮಗೆ ಕೊಡ ಬೇಕು ಎಂದು ಹಿಂದಿನ ಸಾರಿ ಒಪ್ಪಿಕೊಂಡಿದ್ದರು.

ಅಧ್ಯಕ್ಷರು.— ಆಡಿಟ್ ರಿಪೋರ್ಟ್ ಇಟ್ಟಿದ್ದೇವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಕಾಪಿ ಇಟ್ಟರೆ ಎಲ್ಲರೂ ನೋಡಿಕೊಳ್ಳುವುದಕ್ಕಾಗುವುದಿಲ್ಲ.

SRI K. H. PATIL.—It is a very bulky report.

೧೦೦ ಪೇಜಿನ ಮೇಲೆ ಒಂದೊಂದು ರಿಪೋರ್ಟ್ ಇರುತ್ತದೆ.

ಶ್ರೀ ಕೊಣಂದೂರು ಲಿಂಗಪ್ಪ.—ತಮಗೆ ಅನುಕೂಲವಾದ ಭಾಗಗಳನ್ನು ಮಾತ್ರ ತೆಗೆದು ಅಚ್ಚು ಹಾಕಿಸಿದ್ದೀರಿ. ಸಂಪೂರ್ಣವಾದ ಆಡಿಟ್ ರಿಪೋರ್ಟ್ ಇದ್ದರೆ ಚರ್ಚೆಗೆ ಅನುಕೂಲವಾಗುತ್ತದೆ. ನಾಲ್ಕು ಬ್ಯಾಂಕ್‌ಗಳು ಮಾತ್ರ ಅಲ್ಲ ಇನ್ನೂ ಅನೇಕ ಬ್ಯಾಂಕುಗಳು ಅಂಥವು ಇರಬಹುದಂ. ಆ ದೃಷ್ಟಿಯಿಂದ ಸಮಗ್ರವಾದ ತಿಳುವಳಿಕೆ ಪಡೆಯಬೇಕಾಗಿರುವುದರಿಂದ ಎಲ್ಲಾ ಬ್ಯಾಂಕುಗಳ ಆಡಿಟ್ ರಿಪೋರ್ಟ್‌ಬೇಕು. ಅದು ಅಲ್ಲದೇ ಹೋದರೆ ತಪ್ಪಾಗುತ್ತದೆ. ನಿಮಗೆ ಅನುಕೂಲವಾದ ಕೆಲವು ಭಾಗಗಳನ್ನು ತೆಗೆದು ಕೊಟ್ಟಿದ್ದೀರಿ. ಇನ್ನೂ ಕೆಲವು ಭಾಗವನ್ನು ತೆಗೆದುಕೊಟ್ಟಿಲ್ಲ. ಸಂಪೂರ್ಣವಾದ ಆಡಿಟ್ ರಿಪೋರ್ಟ್ ಕೊಟ್ಟರೆ ಮುಂಗಿದ ಸೆಕ್ಷನ್ ಹೊತ್ತಿಗೆ ಚರ್ಚೆ ಮಾಡೋಣ. ಸಂಪೂರ್ಣವಾದ ರಿಪೋರ್ಟ್ ಇಡುವುದು ಒಳ್ಳೆಯದಂ ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಆಗಲೇ ಹೇಳಿದ್ದೇನೆ. ನಮ್ಮ ಅಭಿಪ್ರಾಯ ಈ ಸದನವನ್ನು ದೂರ ಇಡಬೇಕೆಂದು ಏನೂ ಇಲ್ಲ. ಈ ಆಡಿಟ್ ರಿಪೋರ್ಟನ್ನು ಸೈಕ್ಲೋಸ್ಟೈಲ್ ಮಾಡಿಸಬೇಕಾದರೆ ಸಹಸ್ರಾರು ಪುಟಗಳಷ್ಟು ಆಗುತ್ತದೆ. ಮತ್ತು ಇದನ್ನು ಸೈಕ್ಲೋಸ್ಟೈಲ್ ಮಾಡಿಕೊಡಬೇಕಾದರೆ ಬಹಳ ದಿವಸ ಹಿಡಿಯುತ್ತದೆ. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಈಗ ತಮ್ಮ ಮುಂದೆ ಇಟ್ಟಿರುವ ಅನ್ಯೂಯಲ್ ರಿಪೋರ್ಟ್‌ನಿಂದ ತಮ್ಮ ಮನಸ್ಸು ಸಮಾಧಾನವಾಗದೇ ಹೋದರೆ ಆ ಆಡಿಟ್ ರಿಪೋರ್ಟನ್ನು ತರಿಸಿ ಇಡುತ್ತೇನೆ.

Transfer of Municipal Employees in Belgaum District

SRI B. B. NAVANAK (Belgaum).—Madam Speaker, on the 24th of this month, I had given notice of a call attention regarding the transfer of Municipal employees in Belgaum District He has not ordered for holding the election in the Belgaum and Nippani Municipalities. Some employees from Nippani Municipality have been transferred to Belgaum and some persons have been transferred to Bijapur or Bagalkot. When drought conditions are prevailing, where was the need for effecting transfer of the persons ? I request the Hon. Minister through the Chair to make a statement in respect of these transfers. The Minister has issued directions to the Divisional Commissioner to transfer the persons at a time when prices are rising high.